ದಿನಾಂಕ 17.08.2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ಪ್ರತಿವಾದಿ ಪರ ಡಿ ಎಸ್ ವಕೀಲರಿಂದ :**

ನಾನು ಎಸ್ ಎಸ್ ಎಲ್ ಸಿವರೆಗೂ ಓದಿರುತ್ತೇನೆ. ನಾನು ಕನಕಪುರದಲ್ಲಿ ವಾಸವಾಗಿರುತ್ತೇನೆ. ನನ್ನ ತಂದೆ 10 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಳ್ಳುವಾಗ ನನ್ನ ಜೊತೆ ವಾಸವಾಗಿದ್ದರು. ನನ್ನ ತಂದೆಯ ಅಣ್ಣ ರಾಜು ಹೊರಳಗಲ್ಲುನಲ್ಲಿ ವಾಸವಾಗಿದ್ದರು ಅವರು ತೀರಿಕೊಂಡಿರುತ್ತಾರೆ. ನನ್ನ ಚಿಕ್ಕಪ್ಪ ಮುದುವಾಡಿಯಲ್ಲಿ ವಾಸವಾಗಿದ್ದಾರೆ. ನನ್ನ ದೊಡ್ಡಪ್ಪನ ಕುಟುಂಬ ಬೆಂಗಳೂರಿನಲ್ಲಿ ವಾಸವಾಗಿದೆ.

ದಾವಾ ಸ್ವತ್ತಿನ ನಂಬರ್ 226/1 ಎ, 3 ಎಕರೆ 36 ಗುಂಟೆ ಇರುತ್ತದೆ. ನನ್ನ ಪ್ರಮಾಣ ಪತ್ರದಲ್ಲಿನ ಅಂಶಗಳು ನನಗೆ ಅಷ್ಟೊಂದು ಸರಿಯಾಗಿ ಗೊತ್ತಿಲ್ಲ. ಹೊರಳಗಲ್ಲು ನಲ್ಲಿ ಈಗ ನನ್ನ ಕುಟುಂಬದವರು ಯಾರು ವಾಸವಾಗಿಲ್ಲ ಎಂದರೆ ಸರಿ. ಸರ್ವೆ ನಂ.226 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ನ ಅಟ್ಲಾಸ್, ಹಿಸ್ಸಾ ಮೋಜಣಿ, ಆರ್ ಟಿ ಸಿ ಹಾಗೂ ಇತರ ದಾಖಲೆಗಳನ್ನು ನೋಡಿದರೆ ನಾನು ಗುರುತಿಸಬಲ್ಲೆ.

ನನ್ನ ತಾತ ಮಾದಯ್ಯ ಮತ್ತು ಪ್ರತಿವಾದಿ ಬೈರೇಗೌಡ ಅಣ್ಣ ತಮ್ಮಂದಿರು ಎಂದರೆ ಸರಿ. 1957 ರಲ್ಲಿ ವಾದಿ ಮತ್ತು ಪ್ರತಿವಾದಿಯರ ಸ್ವತ್ತುಗಳು ವಿಭಾಗವಾಗಿದ್ದವು ಎಂದರೆ ಸರಿ. 1957 ರಲ್ಲಿ ವಿಭಾಗದಂತೆ ವಾದಿ ಪ್ರತಿವಾದಿಯರು ತಮ್ಮ ಸ್ವತ್ತುಗಳ ಸ್ವಾಧೀನಾನುಭವದಲ್ಲಿದ್ದರು ಎಂದರೆ ಸರಿ. ನನ್ನ ತಾತ ಮಾದಯ್ಯನವರು ತುಂಬಾ ಸಾಲ

ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. 1964 ರಲ್ಲಿ ತನ್ನ ಭಾಗಕ್ಕೆ ಬಂದ ಸರ್ವೆ ನಂ.225/1 ರಲ್ಲಿ 32 1/2 ಗುಂಟೆ ಪ್ರತಿವಾದಿ ಬೈರೇಗೌಡರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಹೇಳಿಕೆಯಲ್ಲಿ ಸದರಿ ಸ್ವತ್ತನ್ನು ಮಾರಾಟ ಮಾಡಿರುವ ಬಗ್ಗೆ ಹೇಳಿದ್ದೇನೆಂದರೆ ಸರಿಯಲ್ಲ.

ನನ್ನ ತಾತ ಮಾದಯ್ಯನ ಭಾಗಕ್ಕೆ ವಿಭಾಗದ ಮುಖಾಂತರ ಸರ್ವೆ ನಂ.225/1 ಮತ್ತು 226/1 ರಲ್ಲಿ ಸ್ವತ್ತುಗಳು ಬಂದಿತ್ತು ಎಂದರೆ ಸರಿ. ಈ ಹಂತದಲ್ಲಿ ಸಾಕ್ಷಿಗೆ ಕೆಲವು ದಾಖಲೆಗಳನ್ನು ತೋರಿಸಲಾಗಿ ಸದರಿ ದಾಖಲೆಗಳ ಪ್ರಕಾರ ಸರ್ವೆ ನಂ.226 ರ ವಿಸ್ತೀರ್ಣ 7 ಎಕರೆ 11 ಗುಂಟೆ ಹಾಗೂ 25 ಗುಂಟೆ ಖರಾಬು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲೆಯ ಪ್ರಕಾರ ಸರ್ವೆನಂ.226 ನಂತರದಲ್ಲಿ 226/1 ಮತ್ತು 226/2 ಆಗಿ ಪೋಡಿಯಾಗಿದೆ ಎಂದರೆ ಸರಿ. ಸಾಕ್ಷಿಯು ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ತದನಂತರ 226/1, 226/1 ಎ ಮತ್ತು 226/1 ಬಿ ಆಗಿ 1965 ರಲ್ಲಿ ಪೋಡಿಯಾಗಿದೆ ಎಂದರೆ ಸಾಕ್ಷಿಯು ಸದರಿ 226/1 ರ ಸ್ವತ್ತು 226/1 ಎ ಮತ್ತು 226/1 ಬಿ ಆಗಿ ನನ್ನ ತಾತ ಪಾಲು ಪಡೆದಾಗಲೇ ಆಗಿದೆ ಎಂದು ನುಡಿಯುತ್ತಾರೆ. 226/1 ಎ 2 ಎಕರೆ 28 1/2 ಗುಂಟೆ ಇದೆ ಎಂದು ದಾಖಲೆಯಲ್ಲಿದೆ ಎಂದರೆ ಸಾಕ್ಷಿಯು ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1957 ರಲ್ಲಿ ದಾವಾ ಸ್ವತ್ತು ಹಿಸ್ಸೆ ಆಗಿದೆ ಎಂದು ನಾವು ನ್ಯಾಯಾಲಯದಲ್ಲಿ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನನ್ನ ತಾತ 2 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ದಾವಾ ಸ್ವತ್ತಿನಲ್ಲಿ ಈಗ ಹಿಪ್ಪುನೇರಳೆಕಡ್ಡಿ ಇದೆ. ಸದರಿ ಸ್ವತ್ತನ್ನು ಪರಿಚಯಸ್ಥರಿಗೆ ಗುತ್ತಿಗೆಗೆ ನೀಡಿದ್ದೇನೆ. ಹೆಸರು ಗೊತ್ತಿಲ್ಲ. ಗುತ್ತಿಗೆಗೆ ನೀಡಿದವರನ್ನು ಸಾಕ್ಷಿಯಾಗಿ ಹಾಜರು ಪಡಿಸುವ ಬಗ್ಗೆ

ಕೇಳಬೇಕು. ಎಷ್ಟು ಮೊತ್ತಕ್ಕೆ ಗುತ್ತಿಗೆ ನೀಡಿದ್ದೇವೆಂದು ನನ್ನ ತಾಯಿಗೆ ಮಾಹಿತಿಇದೆ ನನಗೆ ಮಾಹಿತಿ ಇಲ್ಲ. ನನ್ನ ತಾಯಿಯವರನ್ನು ಸಾಕ್ಷಿ ಮಾಡಬಹುದು. ಈ ದಾವೆಯಲ್ಲಿ ಸಾಕ್ಷಿ ಹೇಳಲು ನನಗೆ ಬೇರೆ ಪಕ್ಷಗಾರರು ಯಾವುದೇ ಮುಕ್ತ್ಯಾರುನಾಮೆಯನ್ನು ನೀಡಿಲ್ಲ ಎಂದರೆ ಸರಿ. ನಮ್ಮ ವಂಶವೃಕ್ಷವನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿದ್ದೇನೆ. ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಮೊದಲನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ